## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.




ಮುಂಗಾರು ಸಾಂಸ್ಕೃತಿಕ ಹಬ್ಬದಲ್ಲಿ ಎತ್ತುಗಳಿಂದ ಭಾರದ ಕಲ್ಲು ಎಳೆಯುವ ಸ್ಪರ್ಧೆ

ಹೆಸರು ಇತ್ತೆಂದು ಇತಿಹಾಸದ ಪುಟಗಳಿಂದ ತಿಳಿದು ಬಂದಾದ.

ರಾಯಚೂರು ನಗರದಾಗ ಎರಡು ಸುತ್ತಿನ ಕ್ವಾಟೆ ಐತಿ. ಇದ್ನ ಹೊರಕೋಟೆ ಮತ್ತು ಒಳಕೋಟೆ ಅಂತ ಕರೀತಾರ. ಈ ಎರಡು ಸುತ್ತಿನ ಕ್ಯಾಟೆಗಳನ್ನು ದಕ್ಷಿಣಕ್ಕಿರುವ ಬೆಟ್ಟಕ್ಕೆ ಕಟ್ಯಾರ. ಒಳಗಿನ ಸುತ್ತು ವಿಠ್ಠಲಪ್ಪ ನಾಯಕ ಕಟ್‌ಸ್ಯಾನ. ಎರಡನೆಯ ಸುತ್ತು ಇಬ್ರಾಹಿಂ ಆದಿಲ್ ಷಾಹ 1549ರಲ್ಲಿ ಕಟ್ಟಿಸ್ಯಾನ. ರಾಯಚೂರು ನಗರದಲ್ಲಿನ ವಿವಿಧ ದರವಾಜಗಳ ಹೆಸರಿನ ಕ್ವಾಟೆಗಳು ಎಲ್ಲರ ಗಮನ ಸೆಳಿತಾವ. ಮೆಕ್ಕಾ ದರವಾಜ, ಸೈಲಾನಿ ದರವಾಜ, ಸಿಕಂದರಿ ದರವಾಜ, ನವರಂಗ ದರವಾಜ, ಕಾಟಿ ದರವಾಜ, ಕಂದಕ ದರವಾಜ, ದೊಡ್ಡಿ ದರವಾಜ, ನೈರುತ್ಯ ಪರಕೋಟ ದ್ವಾರ, ಬ್ರಿಟಿಷರ ಶಸ್ತ್ರಾಗಾರ, ಕೋಟೆ ತಟಿತರಾಯ ಪರಕೋಟ ದ್ವಾರ ಹೀಗೆ ದರವಾಜ, ದ್ವಾರಗಳ ಹೆಸರನ್ನು ಹೊತ್ತ ಈ ಕೋಟೆಗಳು ಅಲ್ಲದೆ ಯಾತೀಮ ಷಾ ಮಸೀದಿ, ಏಕ ಮಿನಾರ ಮಸೀದಿ, ಅಂಧೇರಿ ಬಾವಡಿ, ಖಾಸ ಬಾವಡಿ, ಬಾಲ ಹಿಸ್ಸಾರ, ಬಾಲ ಹಿಸ್ಸಾರಕ್ಕೆ ತೆರಳುವ ದಾರಿ, ಅಸ್ಸಾರ ಷರೀಫ, ಪ್ರಾಚೀನ ಹಿಂದು ಅರಮನೆ, ಕೋಟೆಯ ಜೌಮಿ ಮಸೀದಿ, ದಫರ ಕಿ ಮಸೀದಿ, ಮೀರ ಹಸನ ಸಾಹೇಬ್ ದರ್ಗಾ, ಹಜಾರಾ ಬೇಗ್ ಮಸೀದಿ, ಪೆಟ್ಲಾ ಬುರುಜು, ನೀರಿನ ತೊಟ್ಟಿ, ಕಾಲಿ ಮಸೀದಿ, ಷೇಖ್ ಮಿಯಾನ್ ಸಾಹೇಬ್ ದರ್ಗಾ ಮತ್ತು ಮಸೀದಿ, ಕಾಕತೀಯ ಶಾಸನ, ಸೈಲಾನಿ ದರ್ಗಾ, ಕಲ್ಲಾನೆ, ತೀನ್ ಕಂದೀಲ್ ಹೀಗೆ ಮಸೀದಿ, ದರ್ಗಾಗಳು, ಶಾಸನಗಳು ಇತಿಹಾಸವನ್ನು ನಮ್ಮ ಮುಂದೆ ತೆರೆದಿಡ್ತಾವ ನೋಡ್ರಿ.

ಜಿಲ್ಲೆಯ ಕಲ್ಲೂರು, ಮಸ್ಕಿ, ಮಾನ್ವಿ ಪಟ್ಟಣದ ಬೆಟ್ಟಗುಡ್ಡ, ಮಾನ್ವಿಯ ಬೈಲ್ ಮರ್ಚೆಡ್, ಲಿಂಗಸೂಗೂರಿನ ಪಿಕಳಿಹಾಳ ಇನ್ನು ಮುಂತಾದ ಪ್ರದೇಶಗಳಲ್ಲಿ ಆದಿಮಾನವರ ಕುರುಹುಗಳನ್ನು, ಗುಹಾಚಿತ್ರಗಳನ್ನು ಇವತ್ತಿಗೂ ನಾವ್ ನೋಡಬಹುದು.

1956ರಲ್ಲಿ ರಾಜ್ಯಗಳ ಪುನರ್ ವಿಂಗಡನೆಯಾದಾಗ ರಾಯಚೂರಿನಲ್ಲಿ ಒಟ್ಟು ಒಂಬತ್ತು ತಾಲೂಕುಗಳಿದ್ದವು. ರಾಯಚೂರು, ಮಾನ್ವಿ, ಸಿಂಧನೂರು, ದೇವದುರ್ಗ, ಗಂಗಾವತಿ, ಕೊಪ್ಪಳ, ಕುಷ್ಟಗಿ, ಯಲಬುರ್ಗಾ ಮತ್ತು ಲಿಂಗಸೂಗೂರು ಈ ತಾಲೂಕಗಳನ್ನು ಒಳಗೊಂಡ ರಾಯಚೂರು ಜಿಲ್ಲೆಯು ಆಗ ಅಸ್ತಿತ್ವದಲ್ಲಿತ್ತು. ಮುಂದ 1997ರಾಗ ರಾಯಚೂರಿನಿಂದ ಕೊಪ್ಪಳ ಬ್ಯಾರಾಗಿ ಪ್ರತ್ಯೇಕ ಜಿಲ್ಲಾನ ಆಯಿತು. ಈಗ ರಾಯಚೂರು ಜಿಲ್ಲಾದಾಗ ರಾಯಚೂರು, ಸಿಂಧನೂರು, ಮಾನ್ವಿ, ದೇವದುರ್ಗ, ಲಿಂಗಸ್ಗೂರು,



ಮಡಿವಾಳ ದೇವಸ್ಥಾನದಲ್ಲಿನ ಕೆತ್ತನೆ

ಸಿರಿವಾರ, ಮಸ್ಕಿ ಮತ್ತು ಅರೇಕೆರಾ ಎಂಬ ಎಂಟು ತಾಲೂಕುಗಳು ಅದಾವ.

ಕಪ್ಪು ಮತ್ತು ಕೆಂಪು ಮಿಶ್ರಿತ ಮಣ್ಣು ಸಾಮಾನ್ಯವಾಗಿ ಜಿಲ್ಲೆಯ ಕೇಂದ್ರ ಭಾಗಗಳಲ್ಲಿ ಇದ್ದರೆ, ಉಳಿದ್ ಕಡೆ ಮರಳು ಮಿಶ್ರಿತ ಕೆಂಪು ಮಣ್ಣು ಐತಿ. ಕೆಂಪು ಮಸಾರಿ ಭೂಮಿ, ಹಾಳು ಭೂಮಿ, ಕೆಂಪು ಎರೆ ಭೂಮಿ, ಕಪ್ಪು ಎರೆ ಭೂಮಿ. ಭತ್ತ, ಹತ್ತಿ, ಕಡಲೆ, ಜೋಳ, ಹೈಬ್ರಿಡ್ ಸಜ್ಜೆ, ತೊಗರಿ, ಹೆಸರು, ಸೂರ್ಯಕಾಂತಿ, ಶೇಂಗಾ,

